


ಹೊಲವೀಗ ಸರ್ಕಾರದ ಹೆಸರಿನಲ್ಲಿದೆ'
ಮಾನ್ಯ ಕಂದಾಯ ಅಧಿಕಾರಿಗಳು
ಷರಾ ಬರೆದು ಕಳಿಸಿದ್ದಾರೆ

ಇತ್ತ:
ನಗರದ ಸೋಗು ಹಾಕಿರುವ
ಹಳ್ಳಿ ಊರಿನ ಮನೆಯಲೀಗ
ಕತ್ತಲು ಕತ್ತು ಬಗ್ಗಿಸಿ ಕುಂತಿದೆ
ನಳ ನರ ಸತ್ತು ಬಾಯ್ತೆರೆದು ನಿಂತಿದೆ
ತೆರಿಗೆ ಕಟ್ಟದ ನಾಗರಿಕನೆಂದು
ಕತ್ತರಿಸಿದ ಕರೆಂಟು ತಾರಿನ ತಂತಿ
ತಲೆಯೊಳಗೆ ಚಿಟಿ ಚಿಟಿ ಕಿಡಿ ಸಿಡಿಸುತಿದೆ

ತಲಾಂತರದಿಂದ
ರಾಜರಿಗೆ ಊರ ಗೌಡರಿಗೆ
ಉಂಬ ತಿಂಬ ಕಾಂಬ ಕೊಂಬ
ಎಲ್ಲದಕೂ ಸುಂಕ ಕಟ್ಟಿ ಸುಂಡೆದ್ದು
ತೆರಿಗೆ ತಕರಾರಿನಲ್ಲೇ ಹಣ್ಣಾಗಿ ಮಣ್ಣಾದ ನಾವು
ಪ್ರಜಾಪ್ರಭುತ್ವದಲ್ಲಿ
ಭೂಮಿ ಮನೆ ನೌಕರಿ ಸ್ಮಶಾನ ಆಸ್ಪತ್ರೆ ರಸ್ತೆ
ಹುಟ್ಟು ಅಥವಾ ಸಾವು...
ಯಾವುದರದೇ ಆದರೂ ಒಂದರ
ಕಂದಾಯ ಕಟ್ಟುವುದು ಬಾಕಿ ಉಳಿದೇ ಉಳಿಯುತ್ತದೆ

ಈ ಇಡೀ ಭೂಮಂಡಲಕ್ಕೇ ಆದರೂ ಅಬತಿ
ಕಟ್ಟಬಹುದು
ಆಕಾಶದಷ್ಟಾದರೆ ಏನು ಮಾಡಿಯೇವು
ಮತ್ತೆ ತೆರಿಗೆ ಕಟ್ಟದ ನಾಗರಿಕರಾಗಿ
ಸದಾ ಸರಕಾರಗಳ ಅಂಡಿನಡಿ
ಅಡಗೇ ಹೋಗುವುದರ ಹೊರತು?

